# <u>ಕರ್ನಾಟಕ ವಿಧಾನ ಪರಿಷತ್ತು</u>

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 663**

**ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ**
**(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 11-12-2023**

**ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಮತ್ತು ರಾಜ್ಯ ಸರ್ಕಾರಗಳು "ಪ್ರಾಜೆಕ್ಟ್ ಟೈಗರ್" ಮತ್ತು "ಪ್ರಾಜೆಕ್ಟ್ ಎಲಿಫೆಂಟ್" ಅಡಿಯಲ್ಲಿ ಹುಲಿ ಮತ್ತು ಆನೆಗಳ ಆವಾಸಸ್ಥಾನಗಳ ಸಂರಕ್ಷಣೆಗಾಗಿ ನೀಡುತ್ತಿರುವ ಅನುದಾನ ಪಾಲು ಹಾಗೂ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಮತ್ತು ವೆಚ್ಚವಾದ ಮೊತ್ತ ಎಷ್ಟು; (ವರ್ಷವಾರು, ಯೋಜನೆವಾರು ವಿವರ ನೀಡುವುದು) | ಕೇಂದ್ರ ಮತ್ತು ರಾಜ್ಯ ಸರ್ಕಾರಗಳು "ಹುಲಿ ಯೋಜನೆ" ಮತ್ತು "ಆನೆ ಯೋಜನೆ" ಅಡಿಯಲ್ಲಿ ಹುಲಿ ಮತ್ತು ಆನೆಗಳ ಆವಾಸಸ್ಥಾನಗಳ ಸಂರಕ್ಷಣೆಗಾಗಿ ನೀಡುತ್ತಿರುವ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಈ ಯೋಜನೆಯಡಿ ಅನುದಾನವನ್ನು ಯಾವ ಸಂರಕ್ಷಣಾ ಪ್ರದೇಶಗಳಲ್ಲಿ ಯಾವ ಯಾವ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಹುಲಿ ಯೋಜನೆಯಡಿ ಹುಲಿ ಸಂರಕ್ಷಿತ ಪ್ರದೇಶಗಳು ಹಾಗೂ ಹುಲಿ ಯೋಜನೆಯ ವ್ಯಾಪ್ತಿಯಲ್ಲಿ ಹುಲಿ ರಕ್ಷಣಾದಳಗಳ ಸ್ಥಾಪನೆ, ಮಳೆಗಾಲದಲ್ಲಿ ವಿಶೇಷ ಗಸ್ತು ತಿರುಗುವಿಕೆ, ಮುಂಚೂಣಿ ಸಿಬ್ಬಂದಿ ವರ್ಗದವರ ವಸತಿ ಗೃಹಗಳ ನಿರ್ಮಾಣ ಮತ್ತು ನಿರ್ವಹಣೆ, ಕಳ್ಳಬೇಟೆ ತಡೆ ಶಿಬಿರಗಳ ಸ್ಥಾಪನೆ ಹಾಗೂ ನಿರ್ವಹಣೆ, ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ, ನಿಸ್ತಂತು ಉಪಕರಣಗಳ ಮತ್ತು ವಾಹನಗಳ ನಿರ್ವಹಣೆ, ಬೆಂಕಿಯಿಂದ ರಕ್ಷಣೆ, ವನ್ಯಪ್ರಾಣಿಗಳಿಗೆ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಪ್ರಚಾರ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಹುಲಿಗಳ ಆವಾಸ ಸ್ಥಾನ ಹಾಗೂ ಪರಿಸರ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಆನೆ ಯೋಜನೆಯಡಿಯಲ್ಲಿ ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿ ಅಭಯಾರಣ್ಯಗಳು ಮತ್ತು ಪ್ರಾದೇಶಿಕ ಅರಣ್ಯ ಪ್ರದೇಶಗಳಿಗೆ ಸೇರಿದ ಮೀಸಲು ಅರಣ್ಯಗಳಲ್ಲಿ ಆನೆಗಳ ಆವಾಸ ಸ್ಥಾನಗಳ ಸಂರಕ್ಷಣೆ, ಆನೆ ನಿರೋಧಕ ಕಂದಕ, ಸೌರ ವಿದ್ಯುತ್ ಬೇಲಿಗಳ ನಿರ್ಮಾಣ ಮತ್ತು ನಿರ್ವಹಣೆ, ಕ್ಷಿಪ್ರ ಸ್ಪಂದನ ತಂಡಗಳ ರಚನೆ, ಕಳ್ಳ ಭೇಟೆ ತಡೆ ಶಿಬಿರಗಳು, ಆನೆ ಹಿಮ್ಮೆಟ್ಟಿಸುವ ಶಿಬಿರಗಳ ರಚನೆ ಮತ್ತು ನಿರ್ವಹಣೆ, ಹಾವಳಿ ನಡೆಸುವ ಪುಂಡಾನೆಗಳ ಸೆರೆ ಹಿಡಿದು ಸ್ಥಳಾಂತರಿಸುವುದು, ಕಾಡಾನೆಗಳನ್ನು ಸೆರೆಹಿಡಿಯಲು ಬಳಸುವ ಔಷಧಿ ಮತ್ತು |

ಉಪಕರಣಗಳ ಖರೀದಿ, ಅನಾರೋಗ್ಯ ಮತ್ತು ಗಾಯಗೊಂಡ ಆನೆಗಳ ಶುಶ್ರೂಷೆ ಮಾಡುವುದು, ಮರಣೋತ್ತರ ಪರೀಕ್ಷೆ ಮುಂತಾದ ವಿಚಾರಗಳಲ್ಲಿ ಪಶುವೈದ್ಯರಿಗೆ ತರಬೇತಿ ನೀಡುವುದು, ಆನೆ ಆವಾಸ ಪ್ರದೇಶಗಳಲ್ಲಿ ಮತ್ತು ಸುತ್ತ ಮುತ್ತ ಅವುಗಳ ಸಂರಕ್ಷಣೆ ಮತ್ತು ಸಂತತಿ ಉಳಿಸುವಿಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಇನ್ನಿತರ ಅಗತ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರಾಜ್ಯದಲ್ಲಿರುವ ಹುಲಿ ಮತ್ತು ಆನೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ನಾನಾ ಕಾರಣಗಳಿಗಾಗಿ ಮೃತಪಟ್ಟ ಹುಲಿ ಮತ್ತು ಆನೆಗಳ ಸಂಖ್ಯೆ ಎಷ್ಟು; (ವರ್ಷಾವಾರು ಮಾಹಿತಿ ನೀಡುವುದು)

ರಾಷ್ಟ್ರೀಯ ಹುಲಿ ಗಣತಿ-2022ರ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು **563** ಹುಲಿಗಳಿವೆ.

2023ನೇ ಸಾಲಿನಲ್ಲಿ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ನೇರ ವೀಕ್ಷಣೆಯಿಂದ ನಡೆದ ಆನೆ ಗಣತಿಯ ವರದಿಯಂತೆ ಕರ್ನಾಟಕ ರಾಜ್ಯದಲ್ಲಿ ಅಂದಾಜು **6395** ಆನೆಗಳಿವೆ.

ಕಳೆದ ಮೂರು ವರ್ಷಗಳಲ್ಲಿ ಮೃತಪಟ್ಟ ಹುಲಿ ಹಾಗೂ ಆನೆಗಳ ವಿವರ ಈ ಕೆಳಗಿನಂತಿದೆ:-

| ವರ್ಷ | ಹುಲಿ | ಆನೆ |
|---|---|---|
| 2020-21 | 14 | 74 |
| 2021-22 | 19 | 90 |
| 2022-23 | 16 | 73 |

ಇ) ರಾಜ್ಯದಲ್ಲಿರುವ ಹುಲಿ ಮತ್ತು ಆನೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ನಾನಾ ಕಾರಣಗಳಿಗಾಗಿ ಮೃತಪಟ್ಟ ಹುಲಿ ಮತ್ತು ಆನೆಗಳ ಸಂಖ್ಯೆ ಎಷ್ಟು; (ವರ್ಷಾವಾರು ಮಾಹಿತಿ ನೀಡುವುದು)

ರಾಷ್ಟ್ರೀಯ ಹುಲಿ ಗಣತಿ-2022ರ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು **563** ಹುಲಿಗಳಿವೆ.

2023ನೇ ಸಾಲಿನಲ್ಲಿ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ನೇರ ವೀಕ್ಷಣೆಯಿಂದ ನಡೆದ ಆನೆ ಗಣತಿಯ ವರದಿಯಂತೆ ಕರ್ನಾಟಕ ರಾಜ್ಯದಲ್ಲಿ ಅಂದಾಜು **6395** ಆನೆಗಳಿವೆ.

ಕಳೆದ ಮೂರು ವರ್ಷಗಳಲ್ಲಿ ಮೃತಪಟ್ಟ ಹುಲಿ ಹಾಗೂ ಆನೆಗಳ ವಿವರ ಈ ಕೆಳಗಿನಂತಿದೆ:-

| ವರ್ಷ | ಹುಲಿ | ಆನೆ |
|---|---|---|
| 2020-21 | 14 | 74 |
| 2021-22 | 19 | 90 |
| 2022-23 | 16 | 73 |

ಈ) ಕಳೆದ ಮೂರು ವರ್ಷಗಳಲ್ಲಿ ಹುಲಿ ಮತ್ತು ಆನೆಗಳ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಮತ್ತು ವಿತರಿಸಲಾದ ಪರಿಹಾರದ ಮೊತ್ತ ಎಷ್ಟು; (ವಿವರ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಹುಲಿ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಮತ್ತು ವಿತರಿಸಲಾದ ಪರಿಹಾರದ ಮೊತ್ತ ವಿವರ ಈ ಕೆಳಗಿನಂತಿದೆ:-

| ವರ್ಷ | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 2020-21 | 4 | 30.00 |
| 2021-22 | 2 | 15.00 |
| 2022-23 | 5 | 60.00 |

<table>
<tr>
<td></td>
<td></td>
<td>ಕಳೆದ ಮೂರು ವರ್ಷಗಳಲ್ಲಿ ಆನೆಗಳ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಮತ್ತು ವಿತರಿಸಲಾದ ಪರಿಹಾರದ ಮೊತ್ತ ವಿವರ ಈ ಕೆಳಗಿನಂತಿದೆ:-
<table>
<tr><th>ವರ್ಷ</th><th>ಸಂಖ್ಯೆ</th><th>ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>2020-21</td><td>26</td><td>195.00</td></tr>
<tr><td>2021-22</td><td>28</td><td>232.50</td></tr>
<tr><td>2022-23</td><td>30</td><td>267.50</td></tr>
</table>
</td>
</tr>
<tr>
<td>ಉ)</td>
<td>ಕಳೆದ ಮೂರು ವರ್ಷಗಳಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಲಾದ ಬಂಧಿತ ಆನೆಗಳ (CAPTIVE ELEPHANT) ಸಂಖ್ಯೆ ಎಷ್ಟು (ವರ್ಷವಾರು ಮತ್ತು ರಾಜ್ಯವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಲಾದ ಬಂಧಿತ ಆನೆಗಳ (CAPTIVE ELEPHANT) ವಿವರ ಈ ಕೆಳಗಿನಂತಿದೆ :-
<table>
<tr><th>ವರ್ಷ</th><th>ರಾಜ್ಯ</th><th>ಸಂಖ್ಯೆ</th></tr>
<tr><td>2020-21</td><td>-</td><td>-</td></tr>
<tr><td>2021-22</td><td>-</td><td>-</td></tr>
<tr><td>2022-23</td><td>ಉತ್ತರ ಪ್ರದೇಶ</td><td>04</td></tr>
<tr><td></td><td>ಮಧ್ಯಪ್ರದೇಶ</td><td>14</td></tr>
</table>
</td>
</tr>
</table>

**ಸಂಖ್ಯೆ: ಅಪಜೀ 29 ಎಫ್‌ಟಿಎಸ್ 2023**

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಅನುಬಂಧ- 1 | | | | | | | |
|---|---|---|---|---|---|---|---|
| (ರೂ.ಲಕ್ಷಗಳಲ್ಲಿ) | | | | | | | |
| ಕ್ರ.ಸಂ | ವರ್ಷ | ಕೇಂದ್ರ ಪುರಸ್ಕೃತ ಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ | | | ಭರಿಸಿದ ವೆಚ್ಚ |
| | | | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಒಟ್ಟು |
| 1. | 2020-21 | ಹುಲಿ ಯೋಜನೆ | 2427.35 | 2028.39 | 4455.74 | 4455.74 |
| 2. | | ಆನೆ ಯೋಜನೆ | 489.84 | 220.27 | 710.11 | 710.11 |
| | | **ಒಟ್ಟು** | **2917.19** | **2248.66** | **5165.85** | **5165.85** |
| 1. | 2021-22 | ಹುಲಿ ಯೋಜನೆ | 2868.55 | 952.4 | **3820.95** | 3791.91 |
| 2. | | ಆನೆ ಯೋಜನೆ | 261.2 | 174.13 | 435.33 | 431.42 |
| | | **ಒಟ್ಟು** | **3129.75** | **1126.53** | **4256.28** | **4223.33** |
| 1. | 2022-23 | ಹುಲಿ ಯೋಜನೆ | 1627.52 | 1374 | 3001.51 | 3001.51 |
| 2. | | ಆನೆ ಯೋಜನೆ | 100.19 | 70.69 | 170.88 | 170.88 |
| | | **ಒಟ್ಟು** | **1727.71** | **1444.69** | **3172.39** | **3172.39** |
| | 2023-24 | ಹುಲಿ ಯೋಜನೆ ಮತ್ತು ಆನೆ ಯೋಜನೆ | 891.5675 | 804.516 | 1696.08 | 1696.084 |

9/12/23

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)**
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.